(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಪ್ರೊ. ನಂಜುಂಡಸ್ವಾಮಿಯವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಸ್ಯಾಲರಿ ಕಟ್ ಮಾಡುವ ಬಗ್ಗೆ ಇತ್ಯಾದಿ. ಅದರಲ್ಲಿ ಇದನ್ನೂ ಸೇರಿಸಿಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ : ಇದು ಅವರೊಬ್ಬರಿಗೇ ಅಲ್ಲ. ನೀವು ಸ್ಯಾಲರಿ ತೆಗೆದುಕೊಂಡರೆ ನಿಮಗೂ ಅಪ್ಲೈ ಆಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ.ಎಷ್ಟು ಪರ್ಸೆಂಟ್ ಕಟ್ ಬೇಕಾದರೂ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ: ಅಧ್ಯಕ್ಷರೇ...

ಅಧ್ಯಕ್ಷರು : ಸಾಕುಬಿಡಿ. ಶ್ರೀ ಇದಿನಬ್ಬ ಅವರದ್ದು ಗಡಿಸಂಬಂಧವಾದ ಪ್ರಶ್ನೆ ಇದೆ.

ರಾಜ್ಯದಲ್ಲಿರುವ ಗಡಿ ಪ್ರದೇಶಗಳ ಕನ್ನಡಿಗರಿಗೆ ಸೌಲಭ್ಯಗಳು

50.ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಗಡಿನಾಡಿನ ಕನ್ನಡಿಗರಿಗೆ ಸೇರಿಕೊಂಡಿರುವ ಪ್ರದೇಶಗಳಾವುವು?

ಆ) ಎಲ್ಲೆಲ್ಲಿ ಎಷ್ಟೆಷ್ಟು ಕನ್ನಡಿಗರು 1991ನೇ ಮಾರ್ಚ್ ಅಖೈರುವರೆಗೆ ಇದ್ದಾರೆ?

ಇ) ಈ ಪ್ರದೇಶದ ಕನ್ನಡಿಗರಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳ ವಿವರಗಳು ಏನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಕರ್ನಾಟಕದಲ್ಲಿರುವ ಬೆಳಗಾಂ ಜಿಲ್ಲೆಯ ಚಿಕ್ಕೋಡಿ, ಹುಕ್ಕೇರಿ, ಬೆಳಗಾಂ, ಖಾನಾಪುರ ತಾಲ್ಲೂಕುಗಳಲ್ಲಿನ ಹಲವು ಪ್ರದೇಶಗಳು ಮಹಾರಾಷ್ಟ್ರ ರಾಜ್ಯದಲ್ಲಿರುವ ದಕ್ಷಿಣ ಸೊಲ್ಲಾಪುರ, ಜತ್, ಅಕ್ಕಲಕೋಟೆ, ಗಾಧಿಂಗ್ಲಜ್ ತಾಲ್ಲೂಕುಗಳ ಹಲವು ಪ್ರದೇಶಗಳು ಹಾಗೂ ಕೇರಳದಲ್ಲಿನ ಎಂಟು ಗ್ರಾಮಗಳನ್ನುಳಿದು ಇಡೀ ಕಾಸರಗೋಡು ತಾಲ್ಲೂಕು, ಇತ್ಯಾದಿ, ಇತ್ಯಾದಿ.

ಆ) ಈ ಬಗ್ಗೆ 1991ರ ಜನಗಣತಿಯ ಪ್ರಕಾರ ಮಾಹಿತಿಯು ಲಭ್ಯವಿರುವುದಿಲ್ಲ.

ಇ) ಸೌಲಭ್ಯಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಅನುಬಂಧ

ವಿಧಾನಸಭಾ ಸದಸ್ಯರಾದ ಶ್ರೀ ಬಿ.ಎಂ. ಇದಿನಬ್ಬ(ಉಳ್ಳಾಲ) ಇವರು ಚುಕ್ಕೆ ಗುರುತಿನ ಸಂಖ್ಯೆ 50

ರಾಜ್ಯ ಗಡಿಭಾಗಗಳಲ್ಲಿ ರಾಜ್ಯದ ಒಳಗೆ ಹಾಗೂ ಹೊರಗೆ ವಾಸಿಸುತ್ತಿರುವ ಗಡಿನಾಡ ಕನ್ನಡಿಗರಿಗೆ ಸರ್ಕಾರದವರು ನೀಡುತ್ತಿರುವ ಸೌಲಭ್ಯಗಳ ವಿವರಗಳು.

ಹೊರನಾಡ ಕನ್ನಡಿಗರಿಗೆ ಅಂದರೆ ವಿವಾದಾತ್ಮಕ ಗಡಿ ಪ್ರದೇಶಗಳಲ್ಲಿ ಸಾಮಾನ್ಯವಾಗಿ ವಾಸ್ತವ್ಯವಿರುವ ಕನ್ನಡಿಗರ ಮಕ್ಕಳಿಗಾಗಿ (ಮಹಾರಾಷ್ಟ್ರದ ದಕ್ಷಿಣ ಸೊಲ್ಲಾಪುರ, ಅಕ್ಕಲಕೋಟ್, ಜತ್, ಗಾಧಿಂಗ್ಲಜ್ ಮತ್ತು ಕೇರಳದ ಕಾಸರಗೋಡು ತಾಲ್ಲೂಕುಪ್ರದೇಶಗಳು)

ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಖಾಸಗಿ ಕಾಲೇಜುಗಳ ಪೂರ್ಣಾವಧಿಯ ಕೋರ್ಸುಗಳಿಗಾಗಿ (ಅನುದಾನ ಸಹಿತ: ಅನುದಾನ ರಹಿತ) 12 ಸ್ಥಾನಗಳ ಪ್ರವೇಶಾವಕಾಶವನ್ನು ಮೇಲೆ ತಿಳಿಸಿದ ಪ್ರದೇಶಗಳನ್ನು ಹೊರತುಪಡಿಸಿ, ಕನ್ನಡವನ್ನು ಮಾತೃ ಭಾಷೆಯನ್ನು ಹೊಂದಿದ್ದು ಇತರೇ ರಾಜ್ಯಗಳಲ್ಲಿ ನೆಲೆಸಿರುವ ಹೊರನಾಡ ಕನ್ನಡಿಗರ ಮಕ್ಕಳಿಗಾಗಿ 20 ಸ್ಥಾನಗಳ ಪ್ರವೇಶಾವಕಾಶವನ್ನು ಮೀಸಲಿರಿಸಿದೆ. ರಾಜ್ಯದ ಸರ್ಕಾರಿ ಮತ್ತು ಅನುದಾನ ಸಹಿತ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿಯೂ ಸಹ ಪೂರ್ಣಾವಧಿಯ ಡಿಪ್ಲೋಮ ಕೋರ್ಸ್‌ಗಳಿಗಾಗಿ ಅನುಕ್ರಮವಾಗಿ 10 ಮತ್ತು 20 ಸ್ಥಾನಗಳ ಪ್ರವೇಶಾವಕಾಶವನ್ನು ಮೀಸಲಿರಿಸಿದೆ.

ನೆರೆರಾಜ್ಯಗಳಿಗೆ ಹೊಂದಿಕೊಂಡಿರುವಂತಹ, ರಾಜ್ಯದಲ್ಲಿನ ಗಡಿ ಪ್ರದೇಶಗಳನ್ನು ಗುರುತಿಸಿ, ಅವುಗಳ ಸರ್ವತೋಮುಖ ಅಭಿವೃದ್ಧಿಗಾಗಿ ಗಡಿಪ್ರದೇಶಾಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು ಸದರಿ ಯೋಜನೆಯಲ್ಲಿ ಕನಿಷ್ಟ ಅವಶ್ಯಕತೆಗಳಾದ ಪ್ರಾಥಮಿಕ ಶಿಕ್ಷಣ, ವಯಸ್ಕರ ಶಿಕ್ಷಣ, ಗ್ರಾಮೀಣ ಆರೋಗ್ಯ, ಗ್ರಾಮೀಣ ನೀರು ಪೂರೈಕೆ, ಪಶುವೈದ್ಯ ಮತ್ತು ಸಂಗೋಪನಾ ಸೇವೆಗಳು, ಗ್ರಾಮೀಣ ರಸ್ತೆಗಳು,ಗ್ರಾಮೀಣ ವಿದ್ಯುಚ್ಛಕ್ತಿ ಇತ್ಯಾದಿಗಳಿಗೆ ಆದ್ಯತೆ ನೀಡಲಾಗಿದೆ.

ಶ್ರೀ ಬಿ.ಎಂ. ಇದಿನಬ್ಬ : ಕನ್ನಡ ಮಾತನಾಡುವ ಇತರ ರಾಜ್ಯಗಳಲ್ಲಿ ನೆಲೆಸಿರುವ ಹೊರನಾಡ .ಕನ್ನಡಿಗರಿಗೆ ಮತ್ತು ಅವರ ಮಕ್ಕಳಿಗೆ ಇಂಜಿನಿಯರಿಂಗ್ ಮತ್ತು ಖಾಸಗಿ ಕಾಲೇಜುಗಳಲ್ಲಿ, ಪಾಲಿಟೆಕ್ನಿಕ್‌ಗಳಲ್ಲಿ ಕೆಲವು ಸೀಟುಗಳ ಮೀಸಲಾತಿಯನ್ನು ಸರ್ಕಾರ ನೀಡಿದೆ. ಅದೇರೀತಿ ಅಲ್ಲಿನ ಕನ್ನಡ ಬೆಳವಣಿಗೆಗೆ, ಕನ್ನಡ ಸಾಹಿತ್ಯದ ಬೆಳವಣಿಗೆಗೆ, ಕನ್ನಡ ಸಾಂಸ್ಕೃತಿಕ ಕಾರ್ಯಕ್ಕಗಳ ಬೆಳವಣಿಗೆಗೆ ಹಣದ ನೆರವನ್ನು ಏನಾದರೂ ಸರ್ಕಾರ ನೀಡುತ್ತಾ ಬಂದಿದೆಯೇ?

ಇನ್ನೊಂದು ನೆರೆ ರಾಜ್ಯಗಳಿಗೆ ಹೊಂದಿಕೊಂಡಿರುವಂತಹ, ರಾಜ್ಯಗಳಲ್ಲಿನ ಪ್ರದೇಶಗಳನ್ನು ಗುರುತಿಸಿ, ಅವುಗಳ ಸರ್ವತೋಮುಖವಾದ ಅಭಿವೃದ್ಧಿಗಾಗಿ ಗಡಿ ಪ್ರದೇಶಾಭಿವೃದ್ಧಿ ಯೋಜನೆಯನ್ನು ಅನುಷ್ಠಾನ ಮಾಡಿದ್ದಾರೆ. ಆ ರೀತಿಯಲ್ಲಿ ಕೇರಳದ ಗಡಿ ಪ್ರದೇಶ ಉಳ್ಳಾಲ ಕ್ಷೇತ್ರಕ್ಕೆ ದೊರೆಯಬೇಕಾದ ಸೌಲಭ್ಯ ಸಂಪೂರ್ಣವಾಗಿ ತಪ್ಪಿಹೋಗಿದೆ. ಇಡೀ ಮಂಗಳೂರು ತಾಲ್ಲೂಕಿನ 5 ಕ್ಷೇತ್ರಗಳಿಗೆ ಹಂಚಿಕೊಡಲಾಗಿದೆ. ಆದ್ದರಿಂದ ನಿಜವಾಗಿಯೂ ಹೊರನಾಡ ಗಡಿ ಪ್ರದೇಶಕ್ಕೆ ದೊರಕಬೇಕಾದ ನೆರವು, ಉಳ್ಳಾಲ ಕ್ಷೇತ್ರಕ್ಕೆ ಮಾತ್ರ ದೊರೆಯುವಂತೆ ಮಾಡುವುದು ಅತ್ಯಂತ ಉಪಕಾರವಲ್ಲವೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್.ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಈ ಗಡಿನಾಡ ಕನ್ನಡಿಗರು ಏನಿದ್ದಾರೆ, ಅವರು ಯಾರು, ಯಾರು, ಯಾವ ಯಾವ ಜಾಗಗಳು ಎನ್ನುವ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಸದನದಲ್ಲಿ ಒದಗಿಸಿಕೊಟ್ಟಿದ್ದೇವೆ. ಈ ಗಡಿ ಪ್ರದೇಶದಲ್ಲಿರತಕ್ಕವರಿಗೆ ಕೆಲವು ತೊಂದರೆಗಳಿವೆ ಎನ್ನುವುದನ್ನು ಸರ್ಕಾರ ಮನಗಂಡಿದೆ. ಇಂದಲ್ಲ, ಹಲವಾರು ದಶಕಗಳಿಂದಲೂ, ಹಿಂದೆಯೂ ಮನಗಂಡಿದೆ. ಅದಕ್ಕಾಗಿ ವಿಶೇಷ ಸೌಲಭ್ಯಗಳನ್ನು, ಸವಲತ್ತುಗಳನ್ನು ಕೊಡಬೇಕು. ಬೇರೆ ತಾಲ್ಲೂಕುಗಳು ಎಷ್ಟು ಅಭಿವೃದ್ಧಿಗೊಂಡಿವೆ, ಅದಕ್ಕೆ ತಕ್ಕಹಾಗೆ ಇವು ಕೂಡ ಬರಬೇಕು ಎಂಬ ದೃಷ್ಟಿಯಿಂದ ಹಲವಾರು ವರ್ಷಗಳಿಂದ ಕಾನೂನು ಜಾರಿ ಮಾಡಿಕೊಂಡು ಬಂದಿದ್ದೇವೆ. ಈ ಪಟ್ಟಿ ಪ್ರಕಾರ ಏನು ಎನ್ನುವ ವಿಚಾರವನ್ನು ನಾವು ತಿಳಿಸಿದ್ದೇವೆ. ಅದೇರೀತಿ, ಈ ಸೌಲಭ್ಯಗಳನ್ನು, ಎಲ್ಲೆಲ್ಲಿ ಎಷ್ಟು ಕನ್ನಡಿಗರು ಇದ್ದಾರೆ ಎಂಬ ವಿಚಾರದಲ್ಲೂ ಕೂಡ 1991ನೇ ಮಾರ್ಚಿಯವರೆಗೆ ಎಷ್ಟು ಎಂದು ಕೇಳಿದ್ದಾರೆ, ಈ ಮಾಹಿತಿ ಮಾತ್ರ ಸಿಕ್ಕಿಲ್ಲ, ಎಷ್ಟು ಜನ ಇದ್ದಾರೆಏನೇನು ಎನ್ನುವುದು ನಮಗೆ ಸಿಕ್ಕುವುದಿಲ್ಲ. ಏಕೆಂದರೆ

ರಾಜ್ಯದ ಹೊರಗಡೆ ಇರತಕ್ಕಂಥ ತಮಗೆ ಗೊತ್ತಿರುವ ಹಾಗೆ, ಜತ್ತು, ಒಕ್ಕಲುಕೋಟೆ, ದಕ್ಷಿಣ ಸೊಲ್ಲಾಪುರ ಇವೆಲ್ಲವೂ ಬಂದಿವೆ. ಕೆಲವು ತಾಲ್ಲೂಕುಗಳು ಆ ಕಡೆ ಬರುತ್ತವೆ. ನಮ್ಮ ರಾಜ್ಯದೊಳಗೆ ಕೆಲವು ತಾಲ್ಲೂಕುಗಳು ಬರುವುದಿಲ್ಲ. ಆದ್ದರಿಂದ ಎಷ್ಟು ಜನ ಇದ್ದಾರೆ ಎಂಬ ವಿವರಗಳು ಕರಾರುವಕ್ಕಾಗಿ ಸಿಕ್ಕುತ್ತಾ ಇಲ್ಲ. ಅದನ್ನು ನೋಡಿ, ಆ ಕಡೆಯಿಂದ ಸಿಕ್ಕುವಹಾಗಿದ್ದರೆ,ತರಿಸಿ, ಮಾನ್ಯ ಸದಸ್ಯರಿಗೆ ಒದಗಿಸಿಕೊಡತಕ್ಕ ಕರ್ತವ್ಯವನ್ನು ನಾವು ಮಾಡುತ್ತೇವೆ. ಈ ಸೌಲಭ್ಯಗಳನ್ನು ಕೊಡುವ ವಿಚಾರದಲ್ಲಿ ಮಾತ್ರ, ಈ ಪ್ರದೇಶದಲ್ಲಿ ಕನ್ನಡಿಗರಿಗೆ ಇರತಕ್ಕ ಸೌಲಭ್ಯಗಳು ಏನು ಎನ್ನತಕ್ಕಂಥಾದ್ದು, ಈ ಪಟ್ಟಿಯನ್ನು ಕೂಡ ತಮಗೆ ಕೊಟ್ಟಿದ್ದೇವೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಕೊಡಬೇಕಾದರೆ, ಹೊರನಾಡ ಕನ್ನಡಿಗರು ಎಂದು ಗುರುತಿಸಿ, ಹುಡುಕಿಸಿ, ಸೋಲಾಪುರದವರಿಗೆ ಈ ಸಾರಿ ಕೊಟ್ಟಿದ್ದೇವೆ. ಎರಡು ಜನರಿಗೆ ಈ ಬಾರಿ ಕೊಟ್ಟಿದ್ದೇವೆ. ಇವರು ಕನ್ನಡಿಗರ ಬಗ್ಗೆ ಹೋರಾಟ ಮಾಡುತ್ತಿದ್ದಾರೆಂದು ಹುಡುಕಿಸಿ, ಕರೆಯಿಸಿ, ಕೊಟ್ಟಿದ್ದೇವೆ. ಅಲ್ಲಿಯ ಜನತೆಯ ಸಮಸ್ಯೆಯನ್ನು ಇವರು ತೆಗೆದುಕೊಂಡಿದ್ದಾರೆ ಎನ್ನುವ ದೃಷ್ಟಿಯಿಂದ ಈ ಬಾರಿ ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಟ್ಟಿದ್ದೇವೆ. ಜೊತೆಗೆ ಕನ್ನಡ ಸಂಘಗಳು, ನಾವು ಪೂನಾ ಸಂಘಕ್ಕೆ ಹಣ ಕೊಟ್ಟಿದ್ದೇವೆ, ಇದು ನಮ್ಮ ಕಾಲದಲ್ಲಿ ಎಂದು ಹೇಳುತ್ತಾ ಇಲ್ಲ, ಹಿಂದಿನಿಂದಲೂ ಕೊಡುತ್ತಾ ಬಂದಿದೆ. ಮಾನ್ಯ ವೀರೇಂದ್ರ ಪಾಟೀಲರು ಇದ್ದಾಗಲೂ ಕೊಟ್ಟಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಾಗಲೂ ಕೊಟ್ಟಿದ್ದಾರೆ. ಉದಾಹರಣೆಗೆ ಮದ್ರಾಸ್ ಸಂಘಕ್ಕೆ ಕೊಟ್ಟಿದ್ದಾರೆ, ಬೊಂಬಾಯಿಯವರಿಗೆ ಕೊಟ್ಟಿದ್ದಾರೆ, ಇತ್ಯಾದಿ ಇತ್ಯಾದಿ ಹಲವಾರು ಸಂಘಸಂಸ್ಥೆಗಳವರಿಗೆ ಇದಷ್ಟು ಹಣ ಕೊಡುತ್ತಾ ಬಂದಿದ್ದೇವೆ. ಆ ಮೇಲೆ ಅಲ್ಲಿ ಇವರು ಭಾಷಾ ಅಲ್ಪಸಂಖ್ಯಾತರಾಗುತ್ತಾರೆ. ಅಲ್ಲಿಯ ಸ್ಕೂಲುಗಳನ್ನು ನಡೆಸತಕ್ಕ ವಿಚಾರದಲ್ಲಿ ಸೆಂಟ್ರಲ್ ಗವರ್ನ್‌ಮೆಂಟ್‌ನವರು ನೇಮಕ ಮಾಡುತ್ತಾರೆ. ತಮಗೆ ಗೊತ್ತಿರುವಹಾಗೆ, ಭಾಷಾ ಅಲ್ಪಸಂಖ್ಯಾತರ ಕಮೀಷನ್ ವರದಿ ಬಂದಿದೆ. ಅವರು ಯಾವ ವಿಚಾರವನ್ನು ಹೇಳಿದ್ದಾರೆ, ಅದಕ್ಕನುಗುಣವಾಗಿ ನಾವು ಕಾರ್ಯಕ್ರಮಗಳನ್ನು ಹಾಕಿದ್ದೇವೆ. ಇಲ್ಲಿ ಬೇರೆ, ಭಾಷಾ ಅಲ್ಪಸಂಖ್ಯಾತರಿಗೆ ಮಾಡುವುದು ಅಷ್ಟೇ ಅಲ್ಲ, ನಮ್ಮಲ್ಲೂ ಕೂಡ ಅದೇರೀತಿ ಮಾಡಬೇಕು. ಗಡಿ ಪ್ರದೇಶದಲ್ಲಿರತಕ್ಕವರಿಗೆ ಅನುಕೂಲ ಮಾಡಬೇಕೆಂಬ ದೃಷ್ಟಿಯಿಂದ ನಾವು ಅಕ್ಕಪಕ್ಕದ ರಾಜ್ಯಗಳ ಸರ್ಕಾರಗಳಿಗೆ ಪದೇ ಪದೇ ನೆನಪು ಮಾಡಿದ್ದೇವೆ, ಮಾತುಕತೆಗೆ ತೆಗೆದುಕೊಂಡಿದ್ದೇವೆ, ಪತ್ರವ್ಯವಹಾರ ಕೂಡ ಇದರ ಬಗ್ಗೆ ಮಾಡಿದ್ದೇವೆ. ಮುಂದೆಯೂ ಕೂಡ ಇದನ್ನು ಮುಂದುವರಿಸಿಕೊಂಡು ಹೋಗುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೇ, ಇಲ್ಲಿ ಎರಡು ರಾಜ್ಯಗಳು ಅಂದರೆ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳ ವಿವರ ಮಾತ್ರ ಕೊಟ್ಟಿದ್ದೀರಿ. ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ಸೇರಬೇಕಾದ ಪ್ರದೇಶಗಳ ಬಗ್ಗೆ ತಾವು ವಿವರ ಕೊಟ್ಟಿಲ್ಲ, ತಮಿಳುನಾಡಿನಿಂದ ಬರಬೇಕಾದ ಪ್ರದೇಶಗಳ ಬಗ್ಗೆ ವಿವರ ಕೊಟ್ಟಿಲ್ಲ, ಈ ವಿವರಗಳನ್ನೂ ತಾವು ಕೊಡಬೇಕು. ಎರಡನೆಯದಾಗಿ, ನಮ್ಮ ಗಡಿ ಪ್ರದೇಶದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರದ ನೀತಿ ಏನು, ನಿಲುವು ಏನು ಈ ಬಗ್ಗೆ ನಿಮ್ಮ ಒತ್ತಾಯ ಏನು, ಇದುವರೆಗೂ ಕೈಗೊಂಡಿರುವ ಕಾರ್ಯಕ್ರಮಗಳು ಏನು?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ನಾವು ಇಲ್ಲಿ ಹೇಳಿರತಕ್ಕಂಥಾದ್ದು ಗಡಿಗೆ ಸಂಬಂಧಪಟ್ಟಂತೆ, ಹೆಚ್ಚಾಗಿ ಮಹಾಜನ್ ಆಯೋಗದ ವರದಿ ಏನಿದೆ, ನಾವು ಈ ವಿಚಾರವನ್ನು ಸ್ವಲ್ಪ ಗಮನದಲ್ಲಿಟ್ಟು, ಈ ಉತ್ತರವನ್ನು ಕೊಟ್ಟಿದ್ದೇವೆ. ಬೆಳಗಾಂ ಜಿಲ್ಲೆಯಲ್ಲಿ ಖಾನಾಪುರ ತಾಲ್ಲೂಕು, ಪಕ್ಕದಲ್ಲಿರತಕ್ಕ ಪ್ರದೇಶ, ಮಹಾರಾಷ್ಟ್ರ ರಾಜ್ಯದಲ್ಲಿರತಕ್ಕ

ದಕ್ಷಿಣ ಸೊಲ್ಲಾಪುರ, ಜತ್ತು, ಒಕ್ಕಲುಕೋಟೆ ಇವು ೮ ಕಡೆ ಭಾಗದಲ್ಲಿ ಬರತಕ್ಕಂಥಾದ್ದು ಕೇರಳದಲ್ಲಿ 8 ಗ್ರಾಮಗಳನ್ನು ಉಳಿದು ಇಡೀ ಕಾಸರಗೋಡು ತಾಲ್ಲೂಕು..

ಶ್ರೀ ವಾಟಾಳ್ ನಾಗರಾಜ್ : ಇದರಲ್ಲ ಆಧೋನಿ, ರಾಯದುರ್ಗ, ಮಡಕಶಿರಾ ಬಂದಿಲ್ಲ...

ಶ್ರೀ ಎಸ್. ಬಂಗಾರಪ್ಪ : ಮಡಕಸಿರಾ, ಅಧೋನಿ, ರಾಯದುರ್ಗಾ ಅದೆಲ್ಲಾ ಕೂಡಾ ಇದ್ದಾವೆ.

ಶ್ರೀ ವಾಟಾಳ್ ನಾಗರಾಜ್ : ತಮಿಳುನಾಡಿನ ತಾಳವಾಡಿ ಫಿರ್ಕಾ, ಹೊಸೂರು, ಉದಕಮಂಡಲ ಅದೆಲ್ಲಾ ಕೂಡಾ ಇದೆ. ಆದುದರಿಂದ ಮಹಾಜನ್ ವರದಿ ಬಗ್ಗೆ ಒತ್ತಾಯ ಮಾಡುವುದಕ್ಕೆ ಈಗಾಗಲೇ ನಿಧಾನವಾಗಿದೆ. ಈ ಬಗ್ಗೆ ತಾವು ಪ್ರಧಾನಮಂತ್ರಿಗಳ ಜೊತೆ ಮಾತುಕತೆ ಮಾಡಿ, ಇದರ ಬಗ್ಗೆ ಒತ್ತಾಯ ಮಾಡುವುದಕ್ಕೆ ಕಾಲಮಿತಿಯನ್ನೇನಾದರೂ ಹಾಕುವ ನಿರ್ಧಾರ ಸರಕಾರಕ್ಕೆ ಇದೆಯೇ ?

ಶ್ರೀ ಎಸ್. ಬಂಗಾರಪ್ಪ : ಈ ವಿಚಾರ ಕೇಂದ್ರ ಸರಕಾರದ ಪರಿಶೀಲನೆಯಲ್ಲಿ ಹಲವಾರು ವರ್ಷಗಳಿಂದ ಇದೆ. ನಿಜ ಹೇಳಬೇಕೆಂದರೆ ಇದು ನೆನೆಗುದಿಗೆ ಬಿದ್ದು ಅಲ್ಲಿಯೇ ಇದೆ. ಈ ವಿಚಾರ ಬಂದಾಗ ಇದರ ಬಗ್ಗೆ ಪ್ರತ್ಯೇಕವಾಗಿ ಮಾತನಾಡೋಣ. ಮಹಾಜನ್ ವರದಿ ಬಗ್ಗೆ ಪ್ರತ್ಯೇಕವಾಗಿ ಮಾತನಾಡಬಹುದು. ಇದು ಸಣ್ಣವಿಚಾರ ಅಲ್ಲ, ಇದು ಬಹಳ ದೊಡ್ಡ ವಿಚಾರ. ತಾವು ಪ್ರಸ್ತಾಪ ಮಾಡಿರತಕ್ಕದ್ದು ದೊಡ್ಡವಿಚಾರ ಇದನ್ನು ಪ್ರತ್ಯೇಕವಾಗಿ ವಿಚಾರ ಮಾಡೋಣ. ಕೇಂದ್ರ ಸರಕಾರದ ವಶದಲ್ಲಿ ಇದು ಇದೆ, ಅವರು ಏನು ಮಾಡುತ್ತಾರೆ ಕಾದು ನೋಡೋಣ.

ಶ್ರೀ ಡಿ.ಬಿ.ಚಂದ್ರೇಗೌಡ : ಈ ಉತ್ತರ ನಮ್ಮ ಸದನದಲ್ಲಿ ದಾಖಲೆಗೆ ಹೋಗುತ್ತಿದೆ. ಮುಂದೆ ಈ ಉತ್ತರವನ್ನೇ ಅವಲಂಬಿಸಿ ನಾಳೆ ಬೇರೆಯವರು ಪ್ರಸ್ತಾಪ ಮಾಡಬಹುದು. ಆದುದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕು, ಇಲ್ಲದೇ ಹೋದರೆ ಪೂರ್ಣ ಉತ್ತರವನ್ನು ಒದಗಿಸಿದಮೇಲೆ ಇದು ದಾಖಲೆಗೆ ಹೋಗಬೇಕು. ಇಲ್ಲದೇ ಹೋದರೆ ಇದು ಬಹಳ ಅಪಾಯಕಾರಿಯಾಗುತ್ತದೆ. ಏತಕ್ಕೆಂದರೆ ಆಂಧ್ರಪ್ರದೇಶ ಹಾಗೂ ತಮಿಳುನಾಡು ಗಡಿ ಭಾಗಗಳ ವಿಚಾರ ಇಲ್ಲಿ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಬೇರೆ ರಾಜ್ಯಗಳಿಂದ ಬರಬೇಕಾದ ಪ್ರದೇಶಗಳು ಬಹಳ ಇರುತ್ತವೆ. ಎರಡು ರಾಜ್ಯ ಮಾತ್ರ ಕೊಟ್ಟಿದ್ದೀರಿ, ಮಿಕ್ಕ ರಾಜ್ಯಗಳದ್ದು ಬಹಳ ಇದೆ, ಅದಕ್ಕಾಗಿ ಈ ಉತ್ತರ ದಾಖಲೆಯಾಗುವುದು ಬೇಡ.

ಶ್ರೀ ಎಸ್. ಬಂಗಾರಪ್ಪ : ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಈ ವಿವರ ಕೂಡಾ ಬಹಳ ದೊಡ್ಡ ಪಟ್ಟಿಯಾಗುತ್ತದೆ ಎಂದು ಅವರು ಏನು ಮಾಡಿದ್ದಾರೆ ಎಂದರೆ ಕೇರಳದಲ್ಲಿ ಎಂಟು ಗ್ರಾಮವನ್ನು ಉಳಿದ ಇಡೀ ಕಾಸರಗೋಡು ತಾಲ್ಲೂಕು ಇತ್ಯಾದಿ, ಇತ್ಯಾದಿ ಎಂದು ಹಾಕಿದ್ದಾರೆ. ಅಂದರೆ ಇನ್ನೂ ಕೂಡ ಪಟ್ಟಿ ಇದೆ ಎಂದು ಅರ್ಥ. ಇತ್ಯಾದಿ, ಇತ್ಯಾದಿ ಎಂದು ಅದರಲ್ಲಿ ಇದೆ ನೋಡಿರಿ.

ಶ್ರೀ ಸಿ. ಭೈರೇಗೌಡ : ಬಹಳ ಪ್ರಮುಖವಾದ ಪ್ರಶ್ನೆ ಆಗಿರುವುದರಿಂದ ಇತ್ಯಾದಿ ಇತ್ಯಾದಿ ಎಂದರೆ ಆಗುವುದಿಲ್ಲ. ನಮ್ಮ ದಾಖಲೆಯನ್ನು ನಾವೇ ಸರಿಪಡಿಸಿಕೊಳ್ಳಬೇಕಾಗಿದೆ.

ಅಧ್ಯಕ್ಷರು : ಈ ಪ್ರಶ್ನೆಯನ್ನು ನಾನು ತಡೆ ಹಿಡಿಯುತ್ತೇನೆ.

ಇತ್ಯಾದಿ ಇತ್ಯಾದಿ ಯಾವುವು ಎಂಬುದನ್ನು ಅವರು ಸವಿಸ್ತಾರವಾಗಿ ಹೇಳಲಿ.

ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಹಾಗೂ ಉತ್ತರಗಳ ಪಟ್ಟಿಯನ್ನು ಮಂಡಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಬ್ಲೇಸಿಯಸ್ ಎಂ. ಡಿಸೌಜಾ (ಕಾನೂನು ಸಚಿವರು) : ಮಾನ್ಯ ಸಭಾಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಹಾಗೂ ಅವುಗಳಿಗೆ ನೀಡಿರುವ ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದ ಮಾರಾಟ ತೆರಿಗೆಯಿಂದ ಬಂದ ಆದಾಯ

10-ಶ್ರೀ ಎಸ್. ಶಫಿಅಹ್ಮದ್ (ತುಮಕೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ಕಳೆದ ಐದು ವರ್ಷಗಳಲ್ಲಿ 1987-91ರ ಸಾಲುಗಳಲ್ಲಿ (ರಾಜ್ಯ ಜಮಾ) ಮಾರಾಟ ತೆರಿಗೆಯಿಂದ ಬಂದ ಆದಾಯವೆಷ್ಟು? (ವಿವರವಾದ ಬೇಡಿಕೆ ವಸೂಲಿ, ಬಾಕಿ (ಡಿ.ಸಿ.ಬಿ) ವಿವರವನ್ನು ಒದಗಿಸುವುದು) ?

ಆ) ರೂ. 10,000 ಕ್ಕೂ ಮೇಲ್ಪಟ್ಟು ಸರ್ಕಾರಕ್ಕೆ ಮಾರಾಟ ತೆರಿಗೆ ಬಾಕಿ, ಇರುವ ವಿವರಗಳು ಮತ್ತು ಸರ್ಕಾರವು ಸದರಿ ಬಾಕಿ, ವಸೂಲಿ ಮಾಡಲು ತೆಗೆದುಕೊಂಡಿರುವ ಕ್ರಮಗಳಾವುವು? (ವಿವರಗಳನ್ನು ಒದಗಿಸುವುದು)

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) 1987-91ರ ವರೆಗಿನ ಬೇಡಿಕೆ ವಸೂಲಿ ಮತ್ತು ಬಾಕಿ ಮಾರಾಟ ತೆರಿಗೆ ವಿವರಗಳು ಈ ಕೆಳಕಂಡಂತೆ ಇದೆ.

ವರ್ಷದ ಕೊನೆಗೆ	*ಬೇಡಿಕೆ*	*ವಸೂಲಿ*	*ಬಾಕಿ*
		(ರೂ. ಕೋಟಿಗಳಲ್ಲಿ)	
31.3.87	797.27	642.74	154.53
31.3.88	947.45	769.17	178.28
31.3.89	1154.12	951.37	202.75
31.3.90	1243.73	1068.19	175.54
31.3.91	1519.17	1298.09	221.08
	5661.74	**4729.56**	**932.18**

ಆ) ಈ ಮಿತಿಗೊಳಪಟ್ಟ ವಿವರಗಳು ಬೃಹದಾಕಾರವಾಗಿದ್ದು ಇದನ್ನು ಕ್ರೋಢೀಕರಿಸಲಾಗುತ್ತಿದೆ. ಈ ವಿವರಗಳನ್ನು ಮಾನ್ಯ ಸದಸ್ಯರಿಗೆ ಸದ್ಯದಲ್ಲೆ ಒದಗಿಸಲಾಗುವುದು. ಬಾಕಿದಾರರಿಂದ ಬಾಕಿ ವಸೂಲಿ ಮಾಡಲು ಮಾರಾಟ ತೆರಿಗೆ ಅಧಿನಿಯಮದಲ್ಲಿ ಸೂಚಿಸಿರುವ ಮಾರ್ಗಸೂಚಿಯಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಕನ್ನಡ ಬೆರಳಚ್ಚುಗಾರರ ಕೊರತೆ.

62-ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲ ಹೊಂಗಲ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?